**ಎರಡನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ**

**ನ್ಯಾಯಾಲಯ, ಭದ್ರಾವತಿ**

**ಸಿಸಿ ಸಂಖ್ಯೆ: 10693/2025**

ಪಿರ್ಯಾದುದಾರರು: ಪಿ. ಮಂಜಪ್ಪ ಬಿನ್ ಪೆಣ್ಣಪ್ಪ,
ಸುಮಾರು 41 ವರ್ಷ,
ವಾಸಃ ಕಬಳಿಕಟ್ಟೆ ಗ್ರಾಮ,
ದೇವರಹಳ್ಳಿ ಅಂಚೆ, ಭದ್ರಾವತಿ.

ವಿರುದ್ಧ

ಆಪಾದಿತಃ ರಮೇಶ ಪಿ
ಸುಮಾರು 55 ವರ್ಷ,
ವಾಸಃ RRR ಹೇರ್ ಸಲೂನ್ ಶಾಪ್,
1 ನೇ ತಿರುವು, ಕನಕ ನಗರ, ಹೊಸ ಸೇತುವೆ ರಸ್ತೆ ,
ಹಳೆ ನಗರ, ಭದ್ರಾವತಿ.

**ಆಪಾದನೆ**

ಶ್ರೀಮತಿ ಚೇತನಾ ಬಿ.ಎ.,ಎಲ್.ಎಲ್.ಬಿ., ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ., ಭದ್ರಾವತಿ ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ಮೇಲೆ ಕೆಳಕಂಡಂತೆ ಆಪಾದನೆಯನ್ನು ಹೊರಿಸುತ್ತಿದ್ದೇನೆ.

ಆರೋಪಿತರಾದ ನೀವು ನಿಮ್ಮ ದರದ್ದು ನಿಮಿತ್ತ ಅಂದರೆ ಗೃಹಕೃತ್ಯದ ಹಾಗೂ ಅರ್ಥಿಕ ವ್ಯವಹರಾದ ಸಲುವಾಗಿ ಪಿರ್ಯಾದುದಾರಿಂದ ದಿನಾಂಕ 24.07.2025 ರಂದು ರೂಪಾಯಿ 3,00,000/- ಹಣವನ್ನು ಸಾಲವಾಗಿ ಪಡೆದಿದ್ದು, ಆರೋಪಿಯಾದ ನೀವು ಸದರಿ ಸಾಲದ ಮರುಪಾವತಿಗಾಗಿ ಇಂಡಿಯನ್ ಬ್ಯಾಂಕ್, ಗಣೇಶ ಸಂಕಿರ್ಣ, ಹೊಸ ಸೇತುವೆ ರಸ್ತೆ, ಕೆಎಸ್ಆರ್ ಟಿ.ಸಿ., ಡಿಪೋ, ಭದ್ರಾವತಿ ಶಾಖೆಗೆ ಸೇರಿದ ಚೆಕ್ ನಂ.801848 ನ್ನು ರೂ.3,00,000/-ಗಳಿಗೆ ದಿನಾಂಕ 24.09.2025 ಕ್ಕೆ ನಮೂದು ಮಾಡಿ ನೀಡಿರುತ್ತೀರಿ, ಸದರಿ ಚೆಕ್ಕನ್ನು ಪಿರ್ಯಾದುದಾರರು ತಾವು ಖಾತೆ ಹೊಂದಿರುವ ಕೋಟಕ್ ಮಹೀಂಧ್ರಾ ಬ್ಯಾಂಕ್ ಭದ್ರಾವತಿ ಶಾಖೆಯ ಮುಖಾಂತರ ನಗದೀಕರಣಕ್ಕಾಗಿ ಸಲ್ಲಿಸಿದ್ದು, ಸದರಿ ಬ್ಯಾಂಕ್

ರವರು ಖಾತೆಯನ್ನು ಪರಿಶೀಲಿಸಿ ಖಾತೆಯಲ್ಲಿ ''FUNDS INSUFFICIENT'' ಎಂಬ ಹಿಂಬರಹದೊಂದಿಗೆ ದಿನಾಂಕ 26.09.2025 ರಂದು ವಾಪಸ್ಸು ಬಂದಿರುತ್ತದೆ. ನಂತರ ದಿನಾಂಕ 08.10.2025 ರಂದು ವಕೀಲರ ಮೂಲಕ ನೊಂದಾಯಿತ ಅಂಚೆ ಮೂಲಕ ತಿಳುವಳಿಕೆ ಪತ್ರವನ್ನು ಕಳುಹಿಸಿದ್ದು, ಸದರಿ ತಿಳುವಳಿಕೆ ಪತ್ರವು ದಿ.09.10.2025 ಖುದ್ದು ಜಾರಿಯಾಗಿರುತ್ತದೆ. ಆದರೂ, ನೀವು ಸದರಿ ನೋಟಿಸಿಗೆ ಮರುಉತ್ತರವನ್ನು ನೀಡುವುದಾಗಲೀ, ಸಾಲವಾಗಿ ಪಡೆದುಕೊಂಡಿರುವ ಹಣವನ್ನು ವಾಪಸ್ಸು ನೀಡುವುದಾಗಲೀ ಮಾಡಿರುವುದಿಲ್ಲ. ಆದ್ದರಿಂದ ಆಪಾದಿತರಾದ ನೀವು ವರ್ಗಾವಣೀಯ ಲಿಖಿತ ಕಾಯ್ದೆ ಕಲಂ 138 ರ ರೀತ್ಯಾ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಾ ಎಂದು ಆಪಾದಿಸಲಾಗಿದೆ.

ಪ್ರಶ್ನೆ-1 : ನಿಮ್ಮ ಮೇಲೆ ಹೊರಿಸಲಾಗಿರುವ ಆಪಾದನೆಯನ್ನು ಕೇಳಿದ್ದಿರಾ? ಅದು ನಿಮಗೆ ತಿಳಿಯಿತೇ?

ಉತ್ತರ :

ಪ್ರಶ್ನೆ-2 : ನೀವು ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೆ?

ಉತ್ತರ :

ಮೇಲ್ಕಂಡಂತೆ ಆಪಾದನೆಯನ್ನು ಆಪಾದಿತನಿಗೆ ತಿಳಿದ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರಗಳನ್ನು ಬರೆದುಕೊಂಡಿರುವುದಾಗಿ ದೃಢೀಕರಿಸಲಾಗಿದೆ.

ದಿನಾಂಕಃ 12.06.2026

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಭದ್ರಾವತಿ.

ಆರೋಪಿಯ ಸಹಿ